ತ್ವರಿತ ಪರಿಹಾರವಾಗಿ ನಗರದ ಹಳೇ ಬಡಾವಣೆಗಳಲ್ಲಿ 358 ಕೊಳವೆ ಬಾವಿಗಳನ್ನು ಕೊರೆದು ಇವುಗಳಿಂದ ನೀರು ಸರಬರಾಜು ಮಾಡಲಾಗುತ್ತಿದೆ.

ಈ) ಬೆಂಗಳೂರು ನಗರಕ್ಕೆ ಶಾಶ್ವತವಾಗಿ ಕುಡಿಯುವ ನೀರನ್ನು ಒದಗಿಸಲು ಕಾವೇರಿ 4ನೇ ಹಂತ 2ನೇ ಘಟ್ಟ ಕೈಗೆತ್ತಿಕೊಂಡು ಇದರಿಂದ ನಗರಕ್ಕೆ ಹೆಚ್ಚುವರಿಯಾಗಿ ದಿನಂಪ್ರತಿ 500 ದಶ ಲಕ್ಷ ಲೀಟರ್ ನೀರು ಸರಬರಾಜು ಮಾಡಲು ಯೋಜನೆ ರೂಪಿಸಲಾಗಿದೆ.

771 ಶ್ರೀ ಶ್ರೀನಿವಾಸ್ ಎಂ. : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ನಗರಕ್ಕೆ ವರ್ತುಲ ರಸ್ತೆ (ರಿಂಗ್‌ರೋಡ್) ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಈ ಹಿಂದೆಯೇ ಗುರುತಿಸಿದ್ದ ಸ್ಥಳದಲ್ಲಿಯೇ ವರ್ತುಲ ರಸ್ತೆ (ರಿಂಗ್‌ರೋಡ್) ಮಾಡಲಾಗುವುದೇ ಅಥವಾ ಬೇರೆ ಯಾವುದಾದರೂ ಸ್ಥಳವನ್ನು ಗುರುತಿಸಿದೆಯೇ (ವಿವರಗಳನ್ನು ನೀಡುವುದು);

ಇ) ಮಂಡ್ಯ ನಗರದ ವರ್ತುಲ ರಸ್ತೆ ಕಾಮಗಾರಿಗಾಗಿ ನಿಗದಿಪಡಿಸಿರುವ ಅನುದಾನದ ಮೊತ್ತ ಎಷ್ಟು;

ಇ) ವರ್ತುಲ ರಸ್ತೆಯ ಕಾಮಗಾರಿಯು ಪ್ರಾರಂಭವಾಗಿರುವುದೇ;

ಉ) ಹಾಗಿದ್ದಲ್ಲಿ, ಕಾಮಗಾರಿಯು ಯಾವ ಹಂತದಲ್ಲಿದೆ (ವಿವರಗಳನ್ನು ನೀಡುವುದು)?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಇಲ್ಲ.

ಆ) ಇ) ಈ) ಮತ್ತು ಉ)

ಉದ್ಭವಿಸುವುದಿಲ್ಲ.

1063 ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ (ಕುಷ್ಟಗಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಯಚೂರು ಜಿಲ್ಲೆ, ಲಿಂಗಸೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಹಟ್ಟಿ ಚಿನ್ನದ ಗಣಿಯಲ್ಲಿ ತಾತ್ಕಾಲಿಕವಾಗಿ ಯಾವ ಯಾವ ಭಾಗಗಳಲ್ಲಿ ಎಷ್ಟು ಜನರು ಕರ್ತವ್ಯ ನಿರ್ವಹಿಸುತ್ತಿದ್ದಾರೆ;

ಆ) ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರನ್ನು ಈ ಹಿಂದೆ ಖಾಯಂ ನೌಕರರೆಂದು ಪರಿಗಣಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ; ಈಗ ಅದು ಯಾವ ಹಂತದಲ್ಲಿದೆ;

ಇ) ಈ ಪ್ರಸ್ತಾವನೆ ವಿಳಂಬವಾಗಲು ಕಾರಣಗಳೇನು?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ರಾಯಚೂರು ಜಿಲ್ಲೆ, ಲಿಂಗಸಗೂರು ತಾಲ್ಲೂಕು ವ್ಯಾಪ್ತಿಯಲ್ಲಿನ ಹಟ್ಟಿ ಚಿನ್ನದ ಗಣಿ ಕಂಪನಿಯಲ್ಲಿ ಕೆಳಕಂಡಂತೆ ತಾತ್ಕಾಲಿಕವಾಗಿ ಒಟ್ಟು 498 ಗುತ್ತಿಗೆ ದಿನಗೂಲಿ ನೌಕರರು ಕಾರ್ಯ ನಿರ್ವಹಿಸುತ್ತಿದ್ದಾರೆ :-

❖ ಗಣಿ ವಿಭಾಗ	:	141
❖ ಲೋಹ ವಿಭಾಗ	:	134
❖ ತಾಂತ್ರಿಕ ವಿಭಾಗ	:	95
❖ ಹೊಸ ಯೋಜನೆ	:	74
❖ ಆಡಳಿತ ವಿಭಾಗ	:	54
ಒಟ್ಟು	:	**498**

ಆ) ಹೌದು. ಪರಿಶೀಲನಾ ಹಂತದಲ್ಲಿದೆ.

ಇ) ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಂವಿಧಾನ ಪೀಠವು ರಿಟ್ ಅರ್ಜಿ ಸಿವಿಲ್ 3595/3612-1999ರಲ್ಲಿ ದಿ: 10-04-2006 ರಂದು ನೀಡಿರುವ ತೀರ್ಪಿನನ್ವಯ ಹಾಗೂ ಈ ಹಿನ್ನೆಲೆಯಲ್ಲಿ, ದಿ: 25-05-06 ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ಹೊರಡಿಸಿರುವ ಸುತ್ತೋಲೆ ಸಂಖ್ಯೆ:ಸಿಆಸುಇ 25 ಸೇಸ್ಥಆ 2003 ರಂತೆ ಈ ಪ್ರಕರಣದಲ್ಲಿ ದಿನಗೂಲಿ ನೌಕರರನ್ನು ನೇರ ಅಥವಾ ಪರೋಕ್ಷವಾಗಿ ಖಾಯಂಗೊಳಿಸಲು ಬರುವುದಿಲ್ಲವೆಂದು ಕಾನೂನು ಇಲಾಖೆಯು ಅಭಿಪ್ರಾಯಪಟ್ಟಿದ್ದು ಈ ಕುರಿತು ಪರಿಶೀಲಿಸಲಾಗುತ್ತಿದೆ.

975 ಶ್ರೀ ಅಮರೇಶ್ : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2008-09 ಮತ್ತು 2009-10ನೇ ಸಾಲಿನಲ್ಲಿ ಮುಳಬಾಗಿಲು ತಾಲ್ಲೂಕಿನಲ್ಲಿ ಎಷ್ಟು ಕಿ.ಮೀ ರಸ್ತೆಯನ್ನು ಅಭಿವೃದ್ಧಿಪಡಿಸಲಾಗಿದೆ; ಇದಕ್ಕಾಗಿ ವೆಚ್ಚ ಮಾಡಿರುವ ಮೊತ್ತವೆಷ್ಟು;

ಆ) ತಾಲ್ಲೂಕಿನ ಬಹುಪಾಲು ರಸ್ತೆಗಳು ದುರಸ್ತಿಗೊಳ್ಳದೆ ಸಂಚಾರಕ್ಕೆ ಅಡಚಣೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;